<u>ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ **.,**ಗುಬ್ಬಿ</u>

<u>ಸಿ.ಸಿ. **727/2019**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ.ಲಕ್ಷ್ಮಮ್ಮ | ಚಾಸಾ.1 |
| ತಂದೆಯ ಹೆಸರು | : | ವೆಂಕಟೇಶಪ್ಪ | ಪ್ರಾಸಾ.1 |
| ವಯಸ್ಸು | : | 60 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸಸ್ಥಳ | : | ಚಿಮ್ಮನಹಳ್ಳಿ | |

ದಿನಾಂಕ **12-06-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>**ಮುಖ್ಯ ವಿಚಾರಣೆಃ ಶ್ರೀಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**</u>

ದಿಃ17 ರಂದು 2019 ರಲ್ಲಿ ನಮ್ಮ ಜಮೀನಾದ ಸ.ನಂಃ 24 ರಲ್ಲಿ ಸಂಜೆ 4-30 ರ ಸಮಯದಲ್ಲಿ ಆರೋಪಿತರು ನಮ್ಮ ಜಮೀನಿನಲ್ಲಿ ಮೇಕೆ ಮತ್ತು ದನಗಳನ್ನು ಬಿಟ್ಟು ಮೇಯಿಸುತ್ತಿದ್ದರು ಅದನ್ನು ನಾನು ಪ್ರಶ್ನಿಸಿದ್ದಕ್ಕೆ ನನಗೆ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1 ನೇ ಆರೋಪಿಯು ನನ್ನ ತಲೆ ಜುಟ್ಟನ್ನು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. ಆಗ ನಾನು ಜೋರಾಗಿ ಕೂಗಿಕೊಂಡಿರುತ್ತೇನೆ.ಅಲ್ಲಿಯೇ ಇದ್ದ ಚಾಸಾ 2 ರವರು ಅಲ್ಲಿಗೆ ಬಂದು ಜಗಳ ಬಿಡಿಸಿರುತ್ತಾರೆ. ಅವರಿಗೂ ಸಹ ಆರೋಪಿತರು ಹಿಡಿದುಕೊಂಡು ಕೈನಿಂದ ಹೊಡೆದಿರುತ್ತಾರೆ ಮತ್ತುಕೊಲೆ ಬೆದರಿಕೆಹಾಕಿರುತ್ತಾರೆ. 1 ನೇ ಆರೋಪಿಯು ನನ್ನ ಎಡಕೈಯನ್ನು ಹಿಡಿದುಕೊಂಡು ಕಚ್ಚಿರುತ್ತಾರೆ. ನನಗೆ ಮೈಕೈಗೆ ನೋವಾದ್ದುದ್ದರಿಂದ ನಾನುಆ ದಿನದಂದು ಪೋಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ಮರುದಿನ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ಸಿ.ಎಸ್.ಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ದಿಃ 20 ರಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು.

ಮರುದಿನ ಪೋಲೀಸರು ಘಟನಾ ಸ್ಥಳದಲ್ಲಿ ಸಂಜೆ 4-00 ರಿಂದ 4-45 ರವರೆಗೂ ಮಹಜರ್ ಅನ್ನು ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ಚಾಸಾ 4 ಮತ್ತು 5 ರವರು ಪೋಲೀಸರು ಇದ್ದರು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದುಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಮಹಜರ್ ಅನ್ನು ಓದಿಹೇಳಿ ನನ್ನ ಹೇಬ್ಬೆಟ್ಟಿನ ಗುರುತನ್ನುಪಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು )**

**ಪಾಟೀ ಸವಾಲುಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿಃ 17-09-2019 ರಂದು ಆರೋಪಿತರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ಚಾಸಾ3 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಆರ್.ವಿ.ವಕೀಲರಿಂದ ಃ**

**ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಗುಬ್ಬಿ**